# ಆತ್ಮವಿಮರ್ಶೆ ಇಲ್ಲದೆ ಉತ್ತಮ ಸಾಹಿತ್ಯ ಸೃಷ್ಟಿ ಸಾಧ್ಯವಿಲ್ಲ



**ನಾಗ ಎಚ್‌. ಹುಬ್ಳಿ**

ಹಿಂದಿಯ ಪ್ರಖ್ಯಾತ ಸಾಹಿತಿ ವಿನೋದ ಕುಮಾರ ಶುಕ್ಲ ಮೃದು ಮಾತಿನ ಸರಳ ಜೀವಿ. 1937ರ ಜನವರಿ 1ರಂದು ಛತ್ತೀಸಗಢ (ಹಿಂದಿನ ಮಧ್ಯಪ್ರದೇಶ) ರಾಜ್ಯದ ರಾಜನಂದಾಗಾಂವ್‌ನಲ್ಲಿ ಜನನ. ಹುಟ್ಟೂರಿನಲ್ಲಿಯೇ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ. ಜಬಲ್ಪುರದ 'ಜವಾಹರಲಾಲ್ ನೆಹರೂ ಕೃಷಿ ವಿಶ್ವವಿದ್ಯಾಲಯ'ದಿಂದ ಕೃಷಿ ವಿಷಯದಲ್ಲಿ ಎಂ.ಎಸ್ಸಿ ಪದವಿ. ರಾಯಪುರದ ಕೃಷಿ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ವೃತ್ತಿಜೀವನ ಆರಂಭ. 1996ರಲ್ಲಿ ಛತ್ತೀಸ್‌ಗಢದ 'ಇಂದಿರಾ ಗಾಂಧಿ ಕೃಷಿ ವಿಶ್ವವಿದ್ಯಾಲಯ'ದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ. 1971ರಲ್ಲಿ 'ಲಗ್‌ಭಗ್ ಜೈಹಿಂದ್' ಕವನ ಸಂಕಲನದ ಮೂಲಕ ಸಾಹಿತ್ಯ ಕ್ಷೇತ್ರವನ್ನು ಪ್ರವೇಶಿಸಿದ ವಿನೋದ್ ಶುಕ್ಲ – 'ನೌಕರ್ ಕಿ ಕಮೀಜ್', 'ಪೇಡ್ ಪರ್ ಕಮರಾ', 'ಖಿಲೇಗಾ ತೊ ದೇಖೇಂಗೆ', 'ದೀವಾರ್ ಮೆ ಏಕ್ ಖಿಡಕಿ ರೆಹತೀ ಥೀ', 'ಮಹಾವಿದ್ಯಾಲಯ್', 'ಅತಿರಿಕ್ತ ನಹೀ' ಮುಂತಾದ ಮಹತ್ವದ ಕೃತಿಗಳ ಮೂಲಕ ಪ್ರಸಿದ್ಧರು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ('ದೀವಾರ್ ಮೇ ಏಕ್ ಖಿಡಕಿ ರೆಹತೀ ಥೀ' ಕೃತಿಗೆ), ಅಂತರರಾಷ್ಟ್ರೀಯ ಮಟ್ಟದ 'ಪೆನ್' (ನಾಬೊಕೇವ್ ಪುರಸ್ಕಾರ) ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರು. ಇದೀಗ ಸಾಹಿತ್ಯ ಲೋಕದ ಮೇರು ಪ್ರಶಸ್ತಿ 'ಜ್ಞಾನಪೀಠ' (ಒಟ್ಟಾರೆ 59ನೆಯದು, ಹಿಂದಿಗೆ 12ನೆಯದು). ಅವರ ಸಾಹಿತ್ಯ ನೊಂದವರ ಬದುಕಿನ ಧ್ವನಿ; ಸಮಾಜದ ದೋಷಗಳನ್ನು ಬಿಂಬಿಸುವ ಕನ್ನಡಿ; ಸಾಧಾರಣ ಸಂಗತಿಯಲ್ಲಿಯೂ ಅಸಾಧಾರಣವಾದುದನ್ನು ಹುಡುಕುತ್ತದೆ. ಅವರ ಸ್ವರ ತುಂಬಾ ಸಣ್ಣದು; ಮಾತನಾಡುವ ಶೈಲಿ ನಿಧಾನ. ಆದರೆ ಅದು ತುಂಬಾ ದೂರದವರೆಗೆ ಕೇಳಿಸುವಷ್ಟು ಶಕ್ತಿಶಾಲಿ, ಪ್ರಭಾವಶಾಲಿ. ಶುಕ್ಲ ಅವರೊಂದಿಗೆ 'ಮಯೂರ'ಕ್ಕಾಗಿ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.